ಮಾಡುವುದಕ್ಕೆ ನಮಗೆ ಅಧಿಕಾರ ಇದೆ. ಮತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಬೀಳುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ.

ಸಚಿವರು ಮತ್ತು ಅಧಿಕಾರಿಗಳಿಗಾಗಿ ಕರ್ನಾಟಕ ಭವನ

418 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನವದೆಹಲಿಯಲ್ಲಿರುವ ಕರ್ನಾಟಕ ಭವನಗಳಲ್ಲಿ ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ವಸತಿ, ಊಟ ಸೌಕರ್ಯಗಳಿಗಾಗಿ ಮಾಡಿದ ಖರ್ಚು ವೆಚ್ಚಗಳೆಷ್ಟು?

ಆ) ಇದರಲ್ಲಿ ಸಚಿವರುಗಳಿಗೆ, ಶಾಸಕರುಗಳಿಗೆ, ಸರ್ಕಾರಿ ಅಧಿಕಾರಿಗಳಿಗೆ ವೆಚ್ಚ ಮಾಡಿದ ಹಣವೆಷ್ಟು?

ಇ) ಸಚಿವರುಗಳು ಅಥವಾ ಅಧಿಕಾರಿಗಳು ಹೆಸರಿಗೆ ಮಾತ್ರ ತಂಗಿದ್ದು ವಸತಿಗಳನ್ನು ತನ್ನ ಆಪ್ತೇಷ್ಟರಿಗೆ ಕೊಟ್ಟು ಅವರು ದುಬಾರಿ ವಿಲಾಸಿ ಹೋಟೆಲುಗಳಲ್ಲಿ ತಂಗುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ರೂ. 118.26 ಲಕ್ಷ

ಆ) ರೂ. 88.75 ಲಕ್ಷ

ಇ) ಇಂಥಹ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರ 118.26 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದೆ. ಆದರೆ ಈ ಖರ್ಚು ಯಾವುದರ ಬಗ್ಗೆ, ಯಾವುದಕ್ಕೆ ಎಷ್ಟು ವೆಚ್ಚ ಮಾಡಲಾಗಿದೆ ಎಂಬುದನ್ನು ಹೇಳಬೇಕು. ಕರ್ನಾಟಕ ಭವನ ದೇಶದಲ್ಲಿ ಯಾವ ಯಾವ ರಾಜ್ಯಗಳಲ್ಲಿ ಇದೆ. ಸರ್ಕಾರ ಎಲ್ಲಾ ರಾಜ್ಯಗಳಲ್ಲಿಯೂ ಕರ್ನಾಟಕ ಭವನದ ವ್ಯವಸ್ಥೆಯನ್ನು ಮಾಡುತ್ತದೆ ಎನ್ನುವ ಉತ್ತರವನ್ನು ನಾನು ಅಪೇಕ್ಷೆ ಮಾಡುತ್ತಿದ್ದೇನೆ. ದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಕೆಲವು ಸಲ ಮಂತ್ರಿಗಳು ಅಧಿಕಾರಿಗಳು ಅಲ್ಲಿಗೆ ಬಂದಾಗ ಶಾಸಕರುಗಳಿಗೆ ಅಲ್ಲಿ ಪ್ರಾಶಸ್ತ್ಯ ಸಿಗದೇ ಇರುವಂತಹ ವಿಚಾರಗಳು ನನ್ನ ಗಮನಕ್ಕೆ ಬಂದಿದೆ. ಈ ರೀತಿಯಾದಾಗ ಸರ್ಕಾರ ಇಂತಹ ತೊಂದರೆಗಳನ್ನು ನಿವಾರಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ. ಹೊಸದಾಗಿ ಶಾಸಕರು ದೆಹಲಿಗೆ ಅಥವಾ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಹೋದಾಗ, ಅವರಿಗೆ ಅಲ್ಲಿನ ಇಲಾಖೆಯ ಅಧಿಕಾರಿಗಳನ್ನು ಅಲ್ಲಿನ ರಾಜ್ಯದ ಮಂತ್ರಿಗಳನ್ನು ಕಂಡು ಮಾತನಾಡುವುದಕ್ಕೆ ಬೇಕಾದಂತಹ ಗೈಡುಗಳ ವ್ಯವಸ್ಥೆಯನ್ನು ಮಾಡುತ್ತದೆಯೆ? ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಸದಸ್ಯರು ಹೇಳಿದಂತಹ ವಿಚಾರಗಳಲ್ಲಿ ಕೆಲವು ವಾಸ್ತಾವಾಂಶ ಇದೆ. ದೆಹಲಿಯಲ್ಲಿ ಇರತಕ್ಕಂಥ ಎರಡು ಕರ್ನಾಟಕ ಭವನದಲ್ಲಿ ನಮ್ಮ ರಾಜ್ಯದಿಂದ ಹೋಗುವಂತಹ ಕೆಲವು ಶಾಸಕರುಗಳಿಗೆ, ಎಂಪಿಗಳಿಗೆ, ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ವಸತಿ ಸೌಕರ್ಯ ಸಿಕ್ಕುವುದಿಲ್ಲವೆಂಬ ಅಂಶ ನಮ್ಮ ಗಮನಕ್ಕೆ ಬಂದಿದೆ. ಒಂದೊಂದು ಸಲ ಕೆಲವು ರಾಜಕೀಯ ಪಕ್ಷಗಳು, ಸಭೆಗಳನ್ನು ನಡೆಸುತ್ತವೆ, ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ನಡೆಯಬಹುದು ಅಥವಾ ರಾಷ್ಟ್ರೀಯ ಮಟ್ಟದ ಎಂಎಲ್, ಅಧಿಕಾರಿಗಳು ಅಲ್ಲಿಗೆ ಹೋಗತಕ್ಕಂಥ ಪರಿಸ್ಥಿತಿ ಬರಬಹುದು. ರಾಜಕೀಯ ಪಕ್ಷಗಳು ಹೋಗತಕ್ಕಂಥ ಸಂದರ್ಭ ಬರಬಹುದು. ಇಂತಹ ಸನ್ನಿವೇಶದಲ್ಲಿ ರಾಜಕೀಯ

ಪಕ್ಷದಿಂದ 50-60 ಜನ ಪ್ರತಿನಿಧಿಗಳು ಒಂದು ಸಾರಿ ಅಲ್ಲಿಗೆ ಹೋದಾಗ ಅಲ್ಲಿ ಜಾಗ ಸಿಗುವುದಿಲ್ಲ. ಅದಕ್ಕೋಸ್ಕರ ಹಿಂದಿನ ಸರ್ಕಾರದವರು ಒಂದು ನಿರ್ಣಯವನ್ನು ಮಾಡಿದ್ದಾರೆ. ಅಲ್ಲಿ ಮೂರನೆಯ ಕರ್ನಾಟಕ ಭವನವನ್ನು ತೆಗೆಯಬೇಕೆನ್ನುವಂಥಾದ್ದು. ಅದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಹಣವನ್ನು ಬಿಡುಗಡೆ ಮಾಡಿ ಅದನ್ನೂ ಕೂಡ ಮಾಡುವಂತಹ ನಿರ್ಣಯವನ್ನು ಮಾಡುತ್ತೇವೆ. ಇದರಿಂದ ಸಮಸ್ಯೆ ಬಗೆಹರಿಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಜನತಾದಳದ 115 ಜನರು ಯಾವುದೋ ಒಂದು ರಾಷ್ಟ್ರೀಯ ಕಾನ್ಫರೆನ್ಸ್ ಹೋಗುತ್ತಿದ್ದಾರೆಂದರೆ ತಕ್ಷಣ 115 ರೂಮುಗಳನ್ನು ಎಲ್ಲಿಂದ ತರುವುದು. ಮೊನ್ನೆ ಬಿ.ಜೆ.ಪಿ.ಯ ಎಂ.ಎಲ್.ಎ.ಗಳು ಹೋದರು ಈ ರೀತಿಯಾದಾಗ ಕಷ್ಟವಾಗುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ನಾವು ಇರುವಂತಹ ವಸ್ತು ಸ್ಥಿತಿಯಲ್ಲಿ ನಾವು ಅನುಸರಿಸುವಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅಲ್ಲಿ ಬೇರೆ ಬೇರೆ ರಾಜ್ಯಗಳ ಭವನಗಳು ಅಲ್ಲ ಇದೆ, ಅವರ ಹತ್ತಿರ ಸ್ವಲ್ಪ ಮಟ್ಟಿಗೆ ಸಹಕಾರದಿಂದ ಸೌಲಭ್ಯಗಳನ್ನು ಕೆಲವು ಸಂದರ್ಭದಲ್ಲಿ ಒದಗಿಸಿಕೊಳ್ಳಬೇಕಾಗುತ್ತದೆ. ಅದು ಸಾಧ್ಯವಿಲ್ಲವೆಂದರೆ ಕೆಲವು ಹೋಟೆಲ್ಗಳಲ್ಲಿ ರೂಮುಗಳನ್ನು ರಿಜರ್ವ್ ಮಾಡುವಂತಹ ಸನ್ನಿವೇಶಗಳು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ರೀತಿ ನಾವು ಮಾಡಿಕೊಂಡು ಹೋಗುತ್ತೇವೆ. ಇನ್ನೊಂದು ವಿಷಯ ಕರ್ನಾಟಕ ಭವನದಲ್ಲಿ ಕೆಲವು ಮಾರ್ಪಾಡು ಆಗಬೇಕಾಗಿದೆ. ಅಲ್ಲಿನ ವ್ಯವಸ್ಥೆ ಸರಿಯಾಗಿದೆ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತಾ ಇಲ್ಲ. ಅದನ್ನೂ ಕೂಡ ಸರಿಪಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ನೀವು ಏನು ಹೇಳಿದ್ದೀರಿ, ಇದು 3,65,138 ರೂಪಾಯಿಗಳು ಬಾಕಿ ಇದೆ. ಅದು ಕೂಡ ಬಹುಶಃ ಸನ್ಮಾನ್ಯ ಸದಸ್ಯರು ವಾಪಸ್ಸು ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಇದಕ್ಕೆ ಕೆಲವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ಈ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕರ್ನಾಟಕ ಭವನವನ್ನು ವ್ಯವಸ್ಥೆ ಮಾಡುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೆ?

ಅಧ್ಯಕ್ಷರು : ಸಧ್ಯ ಅದರ ಅಗತ್ಯವಿಲ್ಲ.

ಕರ್ನಾಟಕ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಹಣದ ಬಗ್ಗೆ

359 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಮತ್ತು ಇಲ್ಲಿಯವರೆಗೆ ಕರ್ನಾಟಕ ರಾಜ್ಯದ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಎಷ್ಟು ಹಣ ನಿಗದಿಪಡಿಸಲಾಗಿದೆ?

ಆ) ಇಲ್ಲಿಯವರೆಗೆ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಇಲ್ಲಿಯವರೆಗೆ ವಕ್ಫ್ ಸಂಸ್ಥೆಗಳಿಂದ ಒಟ್ಟು ಬಂದಿರುವಂತಹ ಬೇಡಿಕೆ ಎಷ್ಟು?

ಈ) ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಹಣ ಬಿಡುಗಡೆಯಾಗಿ ಉಳಿದಿರುವ ಹಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ವಕ್ಫ್ ಸಚಿವರು) :